ಇಲ್ಲಿ ತರುತ್ತಿದ್ದೀರಿ. ಈ ಬಗ್ಗೆ ನಾನು ಮಾನ್ಯ ಮಂತ್ರಿಗಳಿಗೆ ಇಷ್ಟೇ ಹೇಳುತ್ತೇನೆ. You any kindly think about that particular spect and come back to us within two days. ತಮಗೆ ನಾನು ಈ ವಿಷಯದಲ್ಲಿ ಸದನಕ್ಕೆ ಉತ್ತರ ಹೇಳಲು ಎರಡು ದಿವರಗಳ ಕಾಲಾವಕಾಶ ಕೊಟ್ಟಿದ್ದೇನೆ.

ಶ್ರೀ ಎಂ.ಸಿ. ನಾಣಯ್ಯ: ತಾವು ಹೇಳಿದ್ದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆ ವಿಚಾರಕ್ಕೆ ಸಂಬಂಧಪಟ್ಟ ಹಾಗೆ ನಾನು ಉತ್ತರ ಎರಡು ದಿವಸದಲ್ಲಿ ಹೇಳುತ್ತೇನೆ.

(ಇ) ಅರಕಲಗೂಡು ತಾಲ್ಲೂಕಿನಲ್ಲಿ ಲೋಕೋಪಯೋಗಿ ವಿಭಾಗವನ್ನು ಸಣ್ಣ ನೀರಾವರಿ ಉಪವಿಭಾಗವನ್ನಾಗಿ ಪರಿವರ್ತಿಸಿರುವುದು

ಶ್ರೀ ಎ.ಜಿ. ರಾಮಸ್ವಾಮಿ (ಅರಕಲಗೂಡು): ಮಾನ್ಯ ಅಧ್ಯಕ್ಷರೇ, ಪ್ರತಿಯೊಂದು ತಾಲ್ಲೂಕಿನಲ್ಲೂ ಕೂಡ ಒಂದು ಲೋಕೋಪಯೋಗಿ ಉಪ ವಿಭಾಗ ಇರಬೇಕೆಂದು ಹೇಳಿ ಈಗ ಹಿಂದೆ ಇದ್ದಂತಹ 59 ಸಣ್ಣ ನೀರಾವರಿ ಉಪ ವಿಭಾಗಗಳನ್ನು ಲೋಕೋಪಯೋಗಿ ಉಪವಿಭಾಗಗಳೆಂದು ಪರಿವರ್ತನೆ ಮಾಡಿ ಸರ್ಕಾರ ಹಿಂದೆ 1994ರಲ್ಲಿ ಒಂದು ಆದೇಶ ಹೊರಡಿಸಿತು. ಇದಾದ ಮೇಲೆ 59 ಲೋಕೋಪಯೋಗಿ ಉಪ ವಿಭಾಗಗಳನ್ನು ಮತ್ತೆ ಸಣ್ಣ ನೀರಾವರಿ ಉಪ ವಿಭಾಗಗಳನ್ನಾಗಿ ಮಾಡಿತು. ಮತ್ತೊಮ್ಮೆ ಸರ್ಕಾರ ಮೂರನೇ ಬಾರಿ ದಿನಾಂಕ 7.2.97ರಲ್ಲಿ ಆದೇಶ ಹೊರಡಿಸಿ ತನ್ನ ಹಿಂದಿನ ಆದೇಶಕ್ಕೆ ತಡೆಯಾಜ್ಞೆ ನೀಡಿ 59 ಉಪ ವಿಭಾಗಗಳ ಪೈಕಿ 57ನ್ನು ಲೋಕೋಪಯೋಗಿ ಉಪ ವಿಭಾಗಗಳನ್ನಾಗಿ ಮುಂದುವರೆಸಿತು. ಇಡೀ ರಾಜ್ಯದಲ್ಲಿ 8ನ್ನು ಮಾತ್ರ ಸಣ್ಣ ನೀರಾವರಿ ಉಪ ವಿಭಾಗಗಳನ್ನಾಗಿ ಪರಿವರ್ತನೆ ಮಾಡಲಾಯಿತು. ಅದರಲ್ಲಿ ನಮ್ಮ ಅರಕಲಗೂಡು ತಾಲ್ಲೂಕು ಕೂಡ ಒಂದು. ಸರ್ಕಾರ ಏಕೆ ಈ ರೀತಿ ಮಾಡಿದೆ?...

ಶ್ರೀ ಬಿ. ಶಿವರಾಂ: ಮಾನ್ಯ ಅಧ್ಯಕ್ಷರೇ, ಇದೇ ವಿಚಾರದಲ್ಲಿ ನನ್ನದೊಂದು ಮನವಿ ಇದೆ.

ಅಧ್ಯಕ್ಷರು: ಏನು ನಿಮ್ಮದು ಅದೇ ತರಹದ ಕೇಸೇ?

ಶ್ರೀ ಬಿ. ಶಿವರಾಂ: ಮಾನ್ಯ ಅಧ್ಯಕ್ಷರೇ, ಹಾಸನ ಜಿಲ್ಲೆಯ ಅರಸೀಕೆರೆ ತಾಲ್ಲೂಕಿನಲ್ಲೂ ಸಹಿತ ಸರ್ಕಾರದವರು ಹೀಗೇ ಮಾಡಿದ್ದಾರೆ. ನನ್ನ ಕ್ಷೇತ್ರ ಈ ತಾಲ್ಲೂಕಿನ ವ್ಯಾಪ್ತಿಗೆ ಬರುತ್ತದೆ. ಸಸರ್ಕಾರದವರು ಇದನ್ನು ಯಾವ ಆಧಾರದ ಮೇಲೆ ಮಾಡಿದ್ದಾರೋ ಎಂಬುದು ನನಗಂತೂ ಗೊತ್ತಾಗುತ್ತಿಲ್ಲ. ನಮ್ಮಲ್ಲಿರುವ ಉಪ ವಿಭಾಗದಲ್ಲಿ ಹೈಯೆಸ್ಟ್ ವರ್ಕ್ ಲೋಡ್ ಇದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಅವರಿಗೊಂದು ಸ್ವಲ್ಪ ರಿಲೀಫ್ ಸಿಗಲಿ ಎಂಬ ಹುದ್ದೇಶದಿಂದ ಮಧ್ಯ ಪ್ರವೇಶಿಸಿ ಮಾತನಾಡುತ್ತಿದ್ದೇನೆ. ಹಾಸನದಲ್ಲಿ ಎಲ್ಲಾ ವಿರೋಧ ಪಕ್ಷದವರು ವಿರುದ್ಧವಾಗೇ ನಡೆಯುತ್ತಿದೆ. ಮಾನ್ಯ ಅಧ್ಯಕ್ಷರು ನಮ್ಮ ರಕ್ಷಣೆಗೆ ಬರಬೇಕು.

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ): ಸನ್ಮಾನ್ಯ ಸಭಾಧ್ಯಕ್ಷರೆ, ಪಿ.ಡಬ್ಲ್ಯೂ.ಡಿ. ಜೊತೆಗೆ ಮಿಕ್ಸ್ ಮಾಡಿದ್ದಾನೆ. ಈಗಾಗಲೇ ನನ್ನ ಕ್ಷೇತ್ರದಲ್ಲಿ ಸುಮಾರು ಒಂಬತ್ತು ಲಿಫ್ಟ್ ಇರಿಗೇಷನ್‌ಗಳು ಇದ್ದು, ರಿಪೇರಿ ಮಾಡುತ್ತಿಲ್ಲ, ಅವು ಕೆಲಸ ಮಾಡುತ್ತಿಲ್ಲ. ಪ್ರತ್ಯೇಕವಾದ ಡಿವಿಜನ್ ಇಲ್ಲ. ತೀರ್ಥಹಳ್ಳಿ ಇರುವುದು ಎಲ್ಲಿ ಚಿತ್ರದುರ್ಗ ಇರುವುದು ಎಲ್ಲಿ ಚಿತ್ರದುರ್ಗದ ಎಕ್ಸಿಕ್ಯೂಟೀವ್ ಇಂಜಿನಿಯರ್ ತೀರ್ಥಹಳ್ಳಿಗೆ ಬಂದು ನೋಡುವುದು ಕಷ್ಟವಾಗುತ್ತದೆ. ನೋಡುವ ಹಾಗೂ ಇಲ್ಲ. ಒಟ್ಟಾರೆ ಅದರಲ್ಲಿ ಲಕ್ಷಾಂತರ ಹಣ ಖರ್ಚು ಮಾಡಿದ್ದಾರೆ.

ಶ್ರೀ ಸಿ.ಎಂ. ಉದಾಸಿ: ಸನ್ಮಾನ್ಯ ಸಭಾಧ್ಯಕ್ಷರೆ, ರಾಜ್ಯದಲ್ಲಿ 59 ನೀರಾವರಿ ಉಪ ವಿಭಾಗ ಮಾಡಬೇಕೆಂದು ಪ್ರಸ್ತಾವನೆ ಪರಿಶೀಲನೆಯಲ್ಲಿದೆ. ನೀರಾವರಿ ಇಲಾಖೆ ಪರಿವರ್ತನೆಯಲ್ಲಿ ಇದ್ದಾಗ ಅನೇಕ ಜಿಲ್ಲೆಗಳಲ್ಲಿ ಸಮಸ್ಯೆಗಳಾಗುತ್ತಿದೆ. ಸಿ.ಅಂಡ್.ಬಿ. ಇಲಾಖೆಯನ್ನು ನೀರಾವರಿ ಇಲಾಖೆಯ ಉಪ ವಿಭಾಗಗಳಾಗಿ ಪರಿವರ್ತನೆ ಮಾಡುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ. ಮತ್ತು ಅಲ್ಲಿ ಕೆಲಸ ಕಾರ್ಯಗಳಿಗೂ ತೊಂದರೆಯಾಗುತ್ತಿದೆ ಎಂದು ಹೇಳಿದಾಗ, ನೀರಾವರಿ ಕೆಲಸಗಳನ್ನು ನೋಡಿಕೊಂಡು ಅಲ್ಲಿರತಕ್ಕಂತಹ ಕೆಲಸಗಳ ಆಧಾರದ ಮೇಲೆ ನೀರಾವರಿಯನ್ನು ಗಮನದಲ್ಲಿಟ್ಟುಕೊಂಡು ಇವತ್ತು 59 ಸಬ್ ಡಿವಿಷನ್‌ಗಳನ್ನು ಮಾಡಲಿಕ್ಕಾಗಿದೆ. ಲೋಕೋಪಯೋಗಿ ಇಲಾಖೆ ಸಬ್ ಡಿವಿಷನ್ ಆಗಿ ಪರಿವರ್ತನೆ ಮಾಡಲೇ ಬೇಕೆಂದು ತೀರ್ಮಾನಕ್ಕೆ ಬಂದಿರುವುದು. ಈ ಮಧ್ಯೆ ನಾನು ಹೇಳುವುದು ಮೊದಲು ತೀರ್ಮಾನವಾದ ಹಾಗೆ ಎಂಟು ಸಬ್ ಡಿವಿಷನ್‌ಗಳನ್ನು ಮಾಡಲಾಗಿದೆ. ಮದ್ದೂರು, ಅರಕಲಗೂಡು, ಬೇಲೂರು, ಅರಸೀಕೆರೆ ಇನ್ನಿತರ ಪ್ರದೇಶಗಳಲ್ಲಿ ಎಂಟು ಉಪ ವಿಭಾಗಗಳನ್ನು ಮಾತ್ರ ನೀರಾವರಿ ಇಲಾಖೆಯಲ್ಲಿ ಕಾರ್ಯಗತ ಮಾಡಿದ್ದರು. ಅದಕ್ಕಾಗಿ ಅದು ಇಲ್ಲಿಂದ ಪರಿವರ್ತನೆ ಆಗುವುದಕ್ಕೆ ವಿಳಂಬವಾಗಿದೆ. ಇದರ ಬಗ್ಗೆ ಮರುಪರಿಶೀಲನೆ ಇರುವುದರಿಂದ ಇಲ್ಲಿ ಮೊದಲು ಇದ್ದಂತಹ ಎಲ್ಲಾ ಕ್ಷೇತ್ರಗಳಲ್ಲಿ ಸಿ.ಅಂಡ್ ಬಿ ಉಪ ವಿಭಾಗಗಳು ಮುಂದುವರೆಯುತ್ತವೆ. ಮತ್ತು ಎಲ್ಲಾ ನೀರಾವರಿಯ ಕೆಲಸ ಕಾರ್ಯಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಿಲ್ಲ, ಅದರ ಗಾಂಭೀರ್ಯತೆಯನ್ನು ಗಮನದಲ್ಲಿಟ್ಟುಕೊಂಡು ಎಲ್ಲಾ ಭಾಗಗಳಿಗೂ ಸರಿಯಾದ ರೀತಿಯಿಂದ ಉಸ್ತುವಾರಿ ನೋಡಿಕೊಳ್ಳುವ ವಿಭಾಗಗಳನ್ನು ರಚಿಸುವುದಕ್ಕೆ ವ್ಯವಸ್ಥೆ ಮಾಡುತ್ತೇವೆ.

ಅಧ್ಯಕ್ಷರು: ಲೋಕೋಪಯೋಗಿ ಇಲಾಖೆಯ ಉಪ ವಿಭಾಗವನ್ನು ಎಲ್ಲಾ ಕಡೆ ಮುಂದುವರೆಸುತ್ತೇವೆ, ಹಳ್ಳಿಗಳಲ್ಲಿ ಇದರ ಸಮಸ್ಯೆ ಸಾಕಷ್ಟು ಇದೆ. ಶ್ರೀ ಜ್ಞಾನೇಂದ್ರರವರು ಪ್ರಸ್ತಾವ ಮಾಡಿದ ವಿಚಾರದ ಜೊತೆ ಜೊತೆಗೆ ಎಲ್ಲಿ ಸಣ್ಣ ನೀರಾವರಿಯ ಕೆಲಸಗಳು ಹೆಚ್ಚಿಗೆ ಇರುತ್ತವೆ, ಅದರ ಆಧ್ಯತೆಯನ್ನು ಗಾಂಭೀರ್ಯವನ್ನು ಗಮನಿಸಿ ಉಪ ವಿಭಾಗ ಕೂಡ ಮಾಡುತ್ತೇವೆಂದು ಹೇಳಿದರು. ಎಲ್ಲಾ ಪ್ರಬ್ಲಮ್ ಸಾಲ್ವ್ ಮಾಡಿದರು.

(ಈ) ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲಿ ಆಗಿರುವ ಅವ್ಯವಹಾರಗಳು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: (ಬಾಗೇಪಲ್ಲಿ) ಸನ್ಮಾನ್ಯ ಅಧ್ಯಕ್ಷರೆ, ಕಳೆದ ಅಧಿವೇಶನದಲ್ಲಿ ತಾವು ಕೂಡ ಈ ವಿಷಯವನ್ನು ಪ್ರಸ್ತಾಪ ಮಾಡಿದ್ದೀರಿ. ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲಿ ಆಗತಕ್ಕಂತಹ ಅವ್ಯವಹಾರ ಮತ್ತು ಅನಾನುಕೂಲಗಳ ಬಗ್ಗೆ ಸಾಕಷ್ಟು ಈ ಸಮಯದಲ್ಲಿ